ಅಸಲು ದಾವಾ ನಂಃ 134/2014
ಪಿ.ಡಬ್ಲ್ಯೂಃ -02

<u>ದಿನಾಂಕಃ 22.03.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲು: ಶ್ರೀ ಆರ್.ಜಿ.ಎಸ್., ಪ್ರತಿವಾದಿ ಪರ ವಕೀಲರಿಂದ</u>

2. ವಾದಿ ನನಗೆ ಏನಾಗಬೇಕು ಎಂದರೆ ಸಾಕ್ಷಿಯು ಪರಿಚಯ ಇರುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ನನಗೆ ಪ್ರತಾಪ್ ರೆಡ್ಡಿ ಇವರ ಕಡೆಯಿಂದ ಪರಿಚಯವಿರುತ್ತಾನೆ.

3. ನಾನು ಬಿ.ಎ. ಪದವೀದರ. ಬಾಂಡ್ ಪೇಪರನ್ನು ಖರೀದಿಸುವಾಗ ಕ್ರಯಕ್ಕೆ ಪಡೆಯುವವರ ಮತ್ತು ಕ್ರಯಕ್ಕೆ ಕೊಡುವವರ ಹೆಸರನ್ನು ಹೇಳಿ ಬರೆಸಬೇಕಾಗುತ್ತದೆ ಎಂದರೆ ಸರಿ. ನಿಪಿಃ 1 ಕ್ರಯದ ಕರಾರು ಪತ್ರವನ್ನು ನಾನು ನೋಡಿರುತ್ತೇನೆ. ಅದರಲ್ಲಿ ಏನು ಬರೆದಿರುತ್ತದೆ ಅಂತ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ನಿಪಿಃ 1 ರ ಶೀರ್ಷಿಕೆಯಲ್ಲಿ ಮೊದಲನೇ ಪಾರ್ಟಿ ಹೆಸರು ಜಿ.ಟಿ. ಪ್ರತಾಪರೆಡ್ಡಿ ಅಂತ ಇದ್ದು, 2ನೇ ಪಾರ್ಟಿ ಎಸ್.ಆರ್.ಓ. ಆಫೀಸ್, ಚಳ್ಳಕೆರೆ ಅಂತ ನಮೂದು ಇರುತ್ತದೆ ಎಂದರೆ ಸರಿ.

4. ನೆಲಗೇತನಹಟ್ಟಿಯಿಂದ ಹಿರೇಕೆರೂರು ಕಾವಲಿಗೆ ಎಷ್ಟು ದೂರ ಆಗುತ್ತದೆ ಎಂದರೆ ಸಾಕ್ಷಿಯು ಸುಮಾರು 5-6 ಕಿ.ಮೀ ಇರುತ್ತದೆ ಎಂದು ನುಡಿಯುತ್ತಾರೆ. ನನಗೆ ಪ್ರತಾಪರೆಡ್ಡಿ ರವರ ಮನೆತನದ ಬಗ್ಗೆ ಮಾಹಿತಿ ಇರುತ್ತದೆ. ಪ್ರತಾಪರೆಡ್ಡಿ ರವರಿಗೆ ಒಬ್ಬ ತಮ್ಮ ಇದ್ದು, ಅವರು ಬುದ್ದಿಮಾಂದ್ಯರಾಗಿದ್ದು, ಅವರು ಈಗ ಮೃತರಾಗಿರುತ್ತಾರೆ. ಪ್ರತಾಪರೆಡ್ಡಿಗೆ ಪ್ರತಿವಾದಿಯು ಹೆಂಡತಿಯಾಗಿರುತ್ತಾಳೆ. ಪ್ರತಾಪರೆಡ್ಡಿಗೆ ಅಕ್ಕತಂಗಿಯರು ಇದ್ದು ಅವರ ಹೆಸರು ನನಗೆ ಗೊತ್ತಿಲ್ಲ.

5. ಪ್ರತಾಪರೆಡ್ಡಿರವರ ಸಹೋದರಿಯರು ಪಿತ್ರಾರ್ಜಿತ ಆಸ್ತಿಯಲ್ಲಿ ತಮಗೆ ಪಾಲು ಬೇಕು ಎಂದು ಚಿತ್ರದುರ್ಗದ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುವ ಕುರಿತು ನನಗೆ ಗೊತ್ತಿಲ್ಲ.

6. ವಾದಿ ಮೃತ ಪ್ರತಾಪರೆಡ್ಡಿಗೆ ಹಣ ಕೊಟ್ಟಿರುವ ಕುರಿತು ಏನಾದರೂ ದಾಖಲೆ ಇದೆಯಾ ಎಂದರೆ ಸಾಕ್ಷಿಯು ಕ್ರಯದ ಕರಾರು ಪತ್ರ ಇರುತ್ತದೆ ಎಂದು ನುಡಿಯುತ್ತಾರೆ.

7. ಬಸಯ್ಯ, ವೆಂಕಟೇಶ್ ಎಂಬ ಸಾಕ್ಷಿದಾರರ ಪರಿಚಯ ನನಗೆ ಇರುವುದಿಲ್ಲ. ಅವರನ್ನು ವಾದಿಯು ಕರೆದುಕೊಂಡು ಬಂದಿದ್ದನು. ಆದರೆ ಪತ್ರ ಬರೆದ ವಕೀಲರಾದ

ಹನುಮಂತಪ್ಪ  ಇವರ ಪರಿಚಯ ಇರುತ್ತದೆ. ವ್ಯವಹಾರದ ಮಾತುಕತೆ ಚಳ್ಳಕೆರೆಯ ತಾಲ್ಲುಕು ಕಚೇರಿಯಲ್ಲಿ ನಡೆದಿರುತ್ತದೆ. ಬಾಂಡ್ ಪೇಪರನ್ನು ಎಲ್ಲಿಂದ ಖರೀದಿ ಮಾಡಿ ತಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಬಾಂಡ್ ಪೇಪರ್ ಎಷ್ಟು ರೂಪಾಯಿಗಳದ್ದಾಗಿರುತ್ತದೆ ಅಂತ ನನಗೆ ಗೊತ್ತಿಲ್ಲ.

8. ನಿಪಿಃ 1 ರ ಕ್ರಯದ ಕರಾರು ಪತ್ರವನ್ನು ತಾಲ್ಲೂಕು ಕಚೇರಿಯ ಬಳಿ ಸ್ಟಾಂಪ್ ವೆಂಡರ್ ರವರ ಕಚೇರಿಯಲ್ಲಿ  ಟೈಪ್ ಮಾಡಿಸಲಾಗಿದೆ. ನಿಪಿಃ 1 ನ್ನು ಯಾರು ಟೈಪ್ ಮಾಡಿರುತ್ತಾರೆ ಅಂತ ನನಗೆ ಗೊತ್ತಿಲ್ಲ.

9. ವಾದಿಯು ಮೃತ ಪ್ರತಾಪರೆಡ್ಡಿಯೊಂದಿಗೆ ಯಾವುದೇ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಾಪರೆಡ್ಡಿ ರವರು ತಮಗೆ ಸೇರಿದ ಆಸ್ತಿಯ ದಾಖಲೆಗಳನ್ನು ತೆಗೆಸಲು ವಾದಿಗೆ ಪ್ರಮಾಣ ಪತ್ರ ಕೊಟ್ಟಿದ್ದ ಕುರಿತು ನನಗೇನಾದರೂ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಮೃತ ಪ್ರತಾಪರೆಡ್ಡಿಗೆ ದಾವಾ ಆಸ್ತಿಯಗಳನ್ನು ಮಾರಾಟ ಮಾಡಲು ಯಾವುದೇ ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

10. ನಿಪಿಃ 1 ರ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್  ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.